ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ,
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ,
ನಂ: 5/1, ವಿನೋಬಾ ರಸ್ತೆ, ಪ್ರೀಮಿಯರ್ ಸ್ಟುಡಿಯೋ ಎದುರು, ಮಾನಸಗಂಗೋತ್ರಿ, ಮೈಸೂರು–570 006.
E-mail ID:-dsdomysore@gmail.com Ph No:- 0821-2970815

ಸಂಖ್ಯೆ: ಜಿಕೌಕಮ್ಯೆ–7/ಖರೀದಿ/ಸಿ.ಆರ್–1/2019–20 ದಿನಾಂಕ:01/07/2019

# ಅಲ್ಪಾವಧಿ ಟೆಂಡರ್ ಪ್ರಕಟಣೆ

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ, ಮೈಸೂರು ಇಲ್ಲಿಗೆ 2019–20ನೇ ಸಾಲಿಗೆ ಇಲಾಖೆಯ ಕೌಶಲ್ಯಾ ನೋಂದಣಾ ತರಬೇತಿ ಕೇಂದ್ರಗಳ ತಪಾಸಣೆ ಮತ್ತು ಇತರೆ ಕೌಶಲ್ಯಾಭಿವೃದ್ಧಿ ಕಾರ್ಯಚಟುವಟಿಕೆಗಳ ಪರಿವೀಕ್ಷಣೆಗೆ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲು ಅರ್ಹ ನೊಂದಾಯಿತ ಟ್ರಾವೆಲ್ ಏಜೆನ್ಸಿಗಳಿಂದ/ಅಧಿಕೃತ ವಾಹನ ಮಾಲೀಕರಿಂದ ದ್ವಿ ಲಕೋಟೆಯಲ್ಲಿ (ತಾಂತ್ರಿಕ & ಆರ್ಥಿಕ) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

| ಕ್ರ. ಸಂ. | ವಾಹನದ ಸೇವೆ ನೀಡಬೇಕಾದ ಕಛೇರಿಯ ಹೆಸರು | ವಾಹನದ ಮಾದರಿ | ಮಾಸಿಕ ಕ್ರಮಿಸಬೇಕಾದ ದೂರ | ಮಾಸಿಕ ನಿಧಿಪಡಿಸಿದ ಬಾಡಿಗೆ ಮೊತ್ತ | ಟೆಂಡರ್‌ನಲ್ಲಿ ಭಾಗವಹಿಸುವವರ ಅರ್ಹತೆ |
|---|---|---|---|---|---|
| 1. | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು ನಂ. 5/1, ವಿನೋಬ ರಸ್ತೆ, ಪ್ರಿಮಿಯರ್ ಸ್ಟುಡಿಯೋ ಎದುರು, ಮಾನಸಗಂಗೋತ್ರಿ, ಮೈಸೂರು – 570006. | ಸ್ವಿಫ್ಟ್ ಡಿಸೈರ್/ ಇಟಿಯೋಸ್/ ಹೊಂಡ ಅಮೇಜ್ (2017ರ ನಂತರದ ವಾಹನ) | 2500ಕಿ.ಮೀ | 25,000/– | ನೊಂದಾಯಿತ ಟ್ರಾವೆಲ್ ಏಜೆನ್ಸಿಗಳು/ಅಧಿಕೃತ ವಾಹನ ಮಾಲೀಕರು |

1. ಟೆಂಡರ್ ಅರ್ಜಿಯನ್ನು ಕಛೇರಿ ವೇಳೆಯಲ್ಲಿ ಉಚಿತವಾಗಿ ಪಡೆಯಬಹುದು ಅಥವಾ website: www.kaushlakar.com (Tender/EOI) ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಟೆಂಡರ್ ಅರ್ಜಿಗಳನ್ನು ವಿತರಿಸುವ ದಿನಾಂಕ:05.07.2019ರ ಪೂರ್ವಾಹ್ನ 10.30 ಗಂಟೆಯಿಂದ ದಿನಾಂಕ:15.07.2019ರ ಮಧ್ಯಾಹ್ನ 11.00 ಗಂಟೆಯವರೆಗೆ.
3. ಭರ್ತಿ ಮಾಡಿದ ಟೆಂಡರ್ ಫಾರಂ/ದಾಖಲೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:15.07.2019ರ ಸಂಜೆ 1.00 ಗಂಟೆಯವರೆಗೆ
4. ಭರ್ತಿ ಮಾಡಿದ ಟೆಂಡರ್ ಫಾರಂ/ದಾಖಲೆಗಳನ್ನು ದಿನಾಂಕ:16.07.2019ರ ಬೆಳಿಗ್ಗೆ 11.00 ಗಂಟೆಗೆ ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ಕಛೇರಿಯಲ್ಲೇ ತೆರೆಯಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:0821–2970815ರ ಮೂಲಕ ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

**ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,**
**ಮೈಸೂರು ಜಿಲ್ಲೆ, ಮೈಸೂರು**

ನಮೂನೆ–1

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ,
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ,
ನಂ: 5/1, ವಿನೋಬಾ ರಸ್ತೆ, ಪ್ರೀಮಿಯರ್ ಸ್ಟುಡಿಯೋ ಎದುರು, ಮಾನಸಗಂಗೋತ್ರಿ, ಮೈಸೂರು–570 006.
E-mail ID:-dsdomysore@gmail.com Ph No:- 0821-2970815

ಸಂಖ್ಯೆ: ಜಿಕೌಕಮ್ಯೆ–7/ಖರೀದಿ/ಸಿ.ಆರ್–1/2019–20 ದಿನಾಂಕ:28/06/2019

## 2019–20ನೇ ಸಾಲಿನ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನ ಪೂರೈಕೆಯ ತಾಂತ್ರಿಕ ಅರ್ಜಿ ನಮೂನೆ

| | | |
|---|---|---|
| 1. | ಟ್ರಾವೆಲ್ ಏಜೆನ್ಸಿ/ ಅಧಿಕೃತ ಮಾಲೀಕರ ಹೆಸರು ಮತ್ತು ದೂರವಾಣಿ ಸಂಖ್ಯೆ | |
| 2. | ಟ್ರಾವೆಲ್ ಏಜೆನ್ಸಿ/ ಅಧಿಕೃತ ಮಾಲೀಕರ ಪೂರ್ಣ ವಿಳಾಸ | |
| 3. | ವಾಹನದ ಮಾಡೆಲ್ (ವರ್ಷ) 2017ರ ನಂತರದ ವಾಹನ | |
| 4. | ವಾಹನ ಸಂಖ್ಯೆ | |
| 5. | ಆರ್.ಸಿ. ಬುಕ್ ನಕಲು ಪ್ರತಿ & ಬಿ ಎಕ್ಸ್ಟ್ರಾಕ್ಟ್ ಪ್ರತಿ, ಎಫ್.ಸಿ.ವಿವರ | |
| 6. | ವಾಹನದ ವಿಮೆ ಚಾಲ್ತಿಯಲ್ಲಿರುವ ವಿವರ | |
| 7. | Yellow Board ಹೊಂದಿರುವ ಬಗ್ಗೆ ವಿವರ | |
| 8. | ವಾಹನದ ಆರ್.ಟಿ.ಓ ತೆರಿಗೆ ಸಂದಾಯ ಮಾಡಿದ ಅವಧಿ | |
| 9. | Karnataka state transport authority letter & Emission test letter | |
| 10. | ಇ.ಎಂ.ಡಿ. ಮೊಬಲಗಿನ | ಡಿ.ಡಿ.ಸಂ :<br><br>ದಿನಾಂಕ : |

- ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

ದಿನಾಂಕ :
ಸ್ಥಳ :

ಟೆಂಡರ್‌ದಾರರ ಸಹಿ

# ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ

**ನಂ. 5/1, ವಿನೋಬ ರಸ್ತೆ, ಪ್ರಿಮಿಯರ್ ಸ್ಟುಡಿಯೋ ಎದುರು, ಮಾನಸಗಂಗೋತ್ರಿ, ಮೈಸೂರು – 570006.**

## ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನ ಪೂರೈಕೆಯ ಆರ್ಥಿಕ ಬಿಡ್ ಅರ್ಜಿ ನಮೂನೆ

| ಕ್ರಮ ಸಂಖ್ಯೆ | ವಾಹನಗಳ ವಿವರ | ಎಲ್ಲಾ ತೆರಿಗೆ ಸೇರಿದಂತೆ ಹಾಗೂ ವಾಹನ ಸಹಿತ ಚಾಲಕರೊಂದಿಗೆ 2500 ಕಿ.ಮೀ.ವರೆಗೆ ದರ (ರೂ.ಗಳಲ್ಲಿ ಸಂಖ್ಯೆ ಮತ್ತು ಅಕ್ಷರಗಳಲ್ಲಿ) |
|---|---|---|
| 1 | ಸ್ವಿಫ್ಟ್ ಡಿಸೈರ್/ ಇಟಿಯೋಸ್ | |

**ದಿನಾಂಕ:**

**ಸ್ಥಳ :** **ಟೆಂಡರ್‌ದಾರರ ಸಹಿ**

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ,
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ,
ನಂ: 5/1, ವಿನೋಬಾ ರಸ್ತೆ, ಪ್ರೀಮಿಯರ್ ಸ್ಟುಡಿಯೋ ಎದುರು, ಮಾನಸಗಂಗೋತ್ರಿ, ಮೈಸೂರು–570 006.
E-mail ID:-dsdomysore@gmail.com Ph No:- 0821-2970815

ಸಂಖ್ಯೆ: ಜಿಕೌಕಮ್ಯೆ–7/ಖರೀದಿ/ಸಿ.ಆರ್–1/2019–20 ದಿನಾಂಕ:28/06/2019

## ತಾಂತ್ರಿಕ ಬಿಡ್ ಲಕೋಟೆಯಲ್ಲಿ ಲಗತ್ತಿಸಬೇಕಾದ ದಾಖಲೆಗಳು :

1. ಟ್ರಾವೆಲ್ ಏಜೆನ್ಸಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು ಹಾಗೂ ಹಾಲಿ ಚಾಲ್ತಿಯಲ್ಲಿರುವ ನವೀಕರಣದ ಪ್ರತಿ ಸಲ್ಲಿಸುವುದು.
2. ವಾಹನ ಸೇವೆ ಉದ್ದಿಮೆ ನಡೆಸಲು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಚಾಲ್ತಿ ಪರವಾನಗಿ ಪ್ರತಿ.
3. ಅಧಿಕೃತ ವಾಹನ ಮಾಲೀಕರಾದರೆ ಮಾಲಿಕತ್ವದಲ್ಲಿರುವ ವಾಹನದ ಮಾಹಿತಿ ಸಲ್ಲಿಸಬೇಕು.
4. ರೂ.5000/– ಇ.ಎಂ.ಡಿ ಮೊಬಲಗನ್ನು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ ರವರ ಹೆಸರಿಗೆ ತೆಗೆದಿರುವ ಡಿ.ಡಿ. ಯನ್ನು ಸಲ್ಲಿಸಬೇಕು.
5. ಟ್ರಾವೆಲ್ ಏಜೆನ್ಸಿಗಳಿಂದ 2019–20 ನೇ ಸಾಲಿನವರೆಗೆ ತೆರಿಗೆ ಬಾಕಿ ಇಲ್ಲವೆಂಬ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರತಿ.
6. ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರ ಮಾಲಿಕತ್ವದಲ್ಲಿರುವ ವಾಹನದ ಮಾಹಿತಿ. (ವಾಹನದ ಆರ್.ಸಿ ಪುಸ್ತಕ, ಎಫ್.ಸಿ.ಕಾರ್ಡ್, ವಿಮೆ, ಚಾಲಕರ ಪರವಾನಗಿ, ತೆರಿಗೆ, Karnataka state transport authority letter .
7. ಟೆಂಡರ್‌ನಲ್ಲಿ ಯಶಸ್ವಿಯಾದಲ್ಲಿ ಇಲಾಖೆಯ ನಿಬಂಧನೆಗಳಿಗೆ ಒಳಪಟ್ಟು ಸೇವೆ ಒದಗಿಸುವ ಬಗ್ಗೆ ಸ್ವಯಂ ದೃಢೀಕರಣ.
8. ಟ್ರಾವೆಲ್ ಏಜೆನ್ಸಿ/ ಅಧಿಕೃತ ಮಾಲೀಕರ ಪಾನ್ ಕಾರ್ಡ್ ಜೆರಾಕ್ಸ್ ಪ್ರತಿ

## ಷರತ್ತುಗಳು

1. 2019–20ನೇ ಸಾಲಿನ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನದ ಟೆಂಡರ್ ಅರ್ಜಿಯ ಲಕೋಟೆಯೆಂದು ಕವರ್ ಮೇಲೆ ನಮೂದಿಸಬೇಕು.
2. ಟೆಂಡರ್‌ನಲ್ಲಿ ಭಾಗವಹಿಸುವ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಅಪೂರ್ಣ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ ತಾಂತ್ರಿಕವಾಗಿ ಅನರ್ಹವೆಂದು ಪರಿಗಣಿಸಲಾಗುವುದು.
3. ತಾಂತ್ರಿಕವಾಗಿ ಅರ್ಹತೆ ಹೊಂದಿದ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು.
4. ತಾಂತ್ರಿಕ ಮತ್ತು ಆರ್ಥಿಕ ಬಿಡ್ ಫಾರಂ/ ದಾಖಲೆಗಳನ್ನು ಪ್ರತ್ಯೇಕವಾಗಿ ಕವರ್ ಮಾಡಿ ನಂತರ ಎರಡು ಕವರ್‌ನ್ನು ಒಂದು ಕವರ್‌ನಲ್ಲಿ ಹಾಕಿ ಸಲ್ಲಿಸಬೇಕು.
5. ಇ.ಎಂ.ಡಿ ಮೊಬಲಗನ್ನು ಡಿ.ಡಿ.ಮೂಲಕ ಪಾವತಿಸದ , ಮೇಲ್ಕಂಡ ದಾಖಲೆಗಳನ್ನು ಸಲ್ಲಿಸದ ಟ್ರಾವೆಲ್ ಏಜೆನ್ಸಿ/ ಅಧಿಕೃತ ಮಾಲೀಕರ ಅರ್ಜಿಯು ತಾಂತ್ರಿಕವಾಗಿ ಅನರ್ಹವಾಗುತ್ತದೆ
6. ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕೆಳಕಂಡ ನಮೂನೆಯ ಮಾದರಿಯಲ್ಲಿ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ತಾಂತ್ರಿಕ ಬಿಡ್ ದಾಖಲೆಗಳೊಂದಿಗೆ ಆರ್ಥಿಕ ಬಿಡ್ ಸಲ್ಲಿಸಿದ್ದಲ್ಲಿ, ಅಂತಹ ಸಂಸ್ಥೆಯನ್ನು ತಾಂತ್ರಿಕವಾಗಿ ಅರ್ನಹವಾಗಿದೆ ಮತ್ತು ಟೆಂಡರ್‌ನಿಂದ ತಿರಸ್ಕೃತಗೊಂಡಿದೆ ಎಂದು ಪರಿಗಣಿಸಲಾಗುವುದು.
7. ಟೆಂಡರ್‌ನಲ್ಲಿ ಯಶಸ್ವಿಯಾದ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಇಲಾಖೆಯಿಂದ ಸಮ್ಮತಿ ಪತ್ರ ದೊರೆತ 1 ವಾರದೊಳಗೆ ರೂ.100/–ಗಳ ಸ್ಟಾಂಪ್ ಕಾಗದದಲ್ಲಿ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ನಂತರ ಕಾರ್ಯಾದೇಶ ನೀಡಲಾಗುವುದು.

8. ಟೆಂಡರ್‌ನಲ್ಲಿ ಯಶಸ್ವಿಯಾದ ಟ್ರಾವೆಲ್ ಏಜೆನ್ಸಿ/ಅಧಿಕೃತ ವಾಹನದ ಮಾಲೀಕರು ಕಾರ್ಯದೇಶ ಸ್ವೀಕರಿಸಿದ 3 ದಿನಗಳೊಳಗೆ ಚಾಲಕ ಸಹಿತ ವಾಹನ ಸೇವೆ ಒದಗಿಸಲು ಬದ್ದರಾಗಿರಬೇಕು.
9. ವಾಹನವು 2017 ರ ನಂತರದ ಮಾಡೆಲ್ ಆಗಿರತಕ್ಕದ್ದು, ವಾಹನವು ಸುಸ್ಥಿತಿಯಲ್ಲಿರಬೇಕು. ದುರಸ್ಥಿ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆ ಮಾಡಬೇಕು. ವಾಹನದ ಮಾಡೆಲ್ ನೋಂದಣಿ ಪತ್ರದ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಅದೇ ವಾಹನವನ್ನು ವರ್ಷ ಪೂರ್ತಿ ಮುಂದುವರೆಸುವುದು.
10. ವಾಹನದ ಆರ್.ಸಿ ಪುಸ್ತಕ, ಎಫ್.ಸಿ.ಕಾರ್ಡ್, ವಿಮೆ, ಚಾಲಕರ ಪರವಾನಗಿ, ತೆರಿಗೆ, Karnataka state transport authority letter ಚಾಲ್ತಿಯಲ್ಲಿರಬೇಕು.
11. ಕಾರ್ಯಾದೇಶ ನೀಡಿದ ದಿನಾಂಕದಿಂದ ವಾಹನವನ್ನು ಒದಗಿಸಲು ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರ ಸಮರ್ಥರಾಗಿರಬೇಕು. ಒಂದು ವೇಳೆ ಯಾವುದೇ ಕಾರಣಕ್ಕೂ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ನಿಗಧಿತ ಅವಧಿಯೊಳಗೆ ಒಪ್ಪಿಕೊಂಡಿರುವ ವಾಹನವನ್ನು ಒದಗಿಸಲು ವಿಫಲವಾದಲ್ಲಿ ಇಲಾಖೆಯು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಹಾಗೂ ಕಛೇರಿಗೆ ಉಂಟಾಗುವ ನಷ್ಟಕ್ಕೆ ನಿಗಧಿಪಡಿಸುವ ದರವನ್ನು ಯಶಸ್ವಿ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಪಾವತಿಸಲು ಬದ್ದರಾಗಿರತಕ್ಕದ್ದು. ಇಲ್ಲವಾದಲ್ಲಿ ಸದರಿ ಮೊತ್ತವನ್ನು ಮುಂದೆ ಪಾವತಿಸಲಾಗುವ ಬಿಲ್‌ನಲ್ಲಿ ಅಥವಾ ಇ.ಎಂ.ಡಿ ಮೊಬಲಗಿನಲ್ಲಿ ಕಟಾಯಿಸಲಾಗುವುದು
12. ಸಮಯಕ್ಕೆ ಸರಿಯಾಗಿ ವಾಹನ ಒದಗಿಸಲು ವಿಫಲವಾದ ಪಕ್ಷದಲ್ಲಿ ಅಥವಾ ವಾಹನವು ಮಾರ್ಗಮಧ್ಯದಲ್ಲಿ ಯಂತ್ರದೋಷದಿಂದ ನಿಂತುಹೋದಲ್ಲಿ ಅಥವಾ ವಾಹನ ಚಾಲಕರ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿ ಅಡಚಣೆಯಿಂದ ಆಗುವ ನಷ್ಟಕ್ಕೆ ಕಛೇರಿ/ ಸಕ್ಷಮ ಪ್ರಾಧಿಕಾರ ನಿಗಧಿಪಡಿಸುವ ದಂಡ(ನಷ್ಟ)ದ ಮೊತ್ತವನ್ನು ಭರಿಸುವುದಾಗಿ ಒಪ್ಪಿಕೊಳ್ಳಬೇಕು ಹಾಗೂ ಇಲಾಖೆಯು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಆಗುವ ನಷ್ಟವನ್ನು ಸಹ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರೆ ಭರಿಸತಕ್ಕದ್ದು. ವಾಹನ ಚಾಲಕ ಚಾಲ್ತಿಯಲ್ಲಿರುವ ಸಂಚಾರಿ ನೀತಿ ನಿಯಮವನ್ನು ಉಲ್ಲಂಘಿಸಿದ್ದಲ್ಲಿ ಹಾಗೂ ಕಾನೂನು ವಿರುದ್ಧವಾದ ಕ್ರಮವಿದ್ದಲ್ಲಿ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರೆ ಜವಾಬ್ದಾರರಾಗುತ್ತಾರೆ.
13. ವಾಹನಗಳಿಗೆ ಸಂಬಂಧಿಸಿದ ಚಾಲಕರುಗಳು ವಾಹನ ಚಾಲನೆಯ ಪರವಾನಗಿ ಬ್ಯಾಡ್ಜ್ ಹೊಂದಿರಬೇಕು. ಮತ್ತು ಪೂರ್ಣ ಅನುಭವ ಹೊಂದಿರಬೇಕು. ಅಲ್ಲದೆ ಇಲಾಖೆ/ಕಛೇರಿ ಅಧಿಕಾರಿ ಮತ್ತು ಸಿಬ್ಬಂದಿಯೊಡನೆ ಅತ್ಯಂತ ಜವಾಬ್ದಾರಿಯುತವಾಗಿ ಸೌಜನ್ಯ ಶಿಸ್ತು ಮತ್ತು ಸಂಯಮದಿಂದ ವರ್ತಿಸಿ ಸಹಕರಿಸುವಂತೆ ನಡೆದುಕೊಳ್ಳಬೇಕು. ಒಂದು ವೇಳೆ ಅಧಿಕಾರಿಗಳ ನಿರ್ದೇಶನವನ್ನು ತಿರಸ್ಕರಿಸಿದಲ್ಲಿ ಅಂತಹ ವಾಹನ ಚಾಲಕ ವಾಹನವು ಆ ದಿನದಂದು ಕಾರ್ಯ ನಿರ್ವಹಿಸಿರುವುದಿಲ್ಲ ಎಂದು ಪರಿಗಣಿಸಿ ಮೇಲಿನ ನಿಬಂಧನೆಗಳಲ್ಲಿ ತಿಳಿಸಿರುವಂತೆ ಕ್ರಮ ಜರುಗಿಸಲಾಗುವುದು.
14. ವಾಹನವನ್ನು ಒದಗಿಸುವ/ಒದಗಿಸಿದ ಸಂದರ್ಭದಲ್ಲಿ ಚಾಲಕರು ಮುಷ್ಕರದಿಂದ ಅಥವಾ ಯಾವುದೇ ರೀತಿಯಿಂದ ಕಛೇರಿಗೆ ತೊಂದರೆಯಾದಲ್ಲಿ ಇದರಿಂದ ಉಂಟಾಗುವ ಆರ್ಥಿಕ ನಷ್ಟಕ್ಕೆ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಸಂಪೂರ್ಣ ಜವಾಬ್ಧಾರರಾಗಿರುತ್ತಾರೆ ಹಾಗೂ ಸದರಿ ನಷ್ಟವನ್ನು ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಭರಿಸತಕ್ಕದ್ದು.
15. ಯಶಸ್ವಿ ಟೆಂಡರಾದ ವಾಹನದವರಿಗೆ ಮುಂಗಡ ಹಣ ನೀಡಲಾಗುವುದಿಲ್ಲ ಮತ್ತು ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಅಧಿಕಾರಿಗಳು ಸೂಚಿಸಿದ ಸಮಯಕ್ಕೆ ಸರಿಯಾಗಿ ವಾಹನ ಒದಗಿಸಬೇಕು ಹಾಗೂ ಯಂತ್ರ ದೋಷವಿಲ್ಲದ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುವ ವಾಹನಗಳನ್ನು ಒದಗಿಸಬೇಕು.
16. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನ ಕಿ.ಮೀ.ಗಳನ್ನು ಕಛೇರಿಯ ಕೆಲಸ ಕಾರ್ಯಗಳಿಗೆ ಮಾತ್ರ ನೀಡಲಾಗುವುದು. ತಿಂಗಳಿಗೆ ಕನಿಷ್ಠ 2500 ಕಿ.ಮೀ.ವರಗೆ ಮಾತ್ರ ಸೀಮಿತವಾಗಿ ಚಲಿಸಬೇಕು.
17. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನ ಈ ಕಛೇರಿಯಿಂದ ನೀಡಲಾದ ಟ್ರಿಪ್ ಶೀಟ್ ನಮೂನೆಯಲ್ಲಿಯೇ ಸಂಬಂಧಿಸಿದ ವಾಹನ ಉಪಯೋಗಿಸಿದ ಅಧಿಕಾರಿಯ ಸಹಿಯನ್ನು ಪ್ರತಿ ದಿನ ಪಡೆದು ಮಾಸಿಕ ಬಿಲ್ಲಿನೊಂದಿಗೆ ಲಗತ್ತಿಸಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
18. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನ ಕರಾರು ಒಪ್ಪಂದದ ಅವಧಿಯಲ್ಲಿ ಯಾವುದೇ ದಿನ ಗೈರುಹಾಜರು ಆಗುವಂತಿಲ್ಲ. ಒಂದು ವೇಳೆ ಯಾವುದೇ ಕಾರಣಕ್ಕಾಗಿ ದಿನ ನಿತ್ಯದ ವಾಹನವು ಅಲಭ್ಯವಾದಾಗ ಟೆಂಡರುದಾರರು ಬದಲಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು, ಇಲ್ಲದಿದ್ದಲ್ಲಿ ಅಂತಹ ದಿನಕ್ಕೆ ದಿನದ ಸರಾಸರಿಯಂತೆ ಮಾಸಿಕ ಬಿಲ್ಲಿನಲ್ಲಿ ಕಟಾಯಿಸಲಾಗುವುದು,

....2

19. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನ ಕಛೇರಿಗೆ ಅಗತ್ಯವಿದ್ದಲ್ಲಿ ರಜಾ ದಿನಗಳಲ್ಲೂ ಕಾರ್ಯ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಮಾಸಿಕ ಬಾಡಿಗೆ ಎಂದರೆ ಇಂಗ್ಲೀಷ್ ಕ್ಯಾಲೆಂಡರ್ ಮಾಸಿಕದ ದಿನಗಳು ಎಂದು ಭಾವಿಸುವುದು.

20. ವಾಹನದ ಡೀಸೆಲ್ ಖರ್ಚು, ಚಾಲಕರ ವೇತನ ಹಾಗೂ ಇತರೆ ಭತ್ಯಗಳನ್ನು ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರು ಭರಿಸಬೇಕು, ಈ ಕಛೇರಿಯಿಂದ ಯಾವುದೇ ರೀತಿಯ ಭತ್ಯೆ ನೀಡಲಾಗುವುದಿಲ್ಲ.
21. ಕರ್ನಾಟಕ ಪ್ರಾದೇಶಿಕ ಸಾರಿಗೆ ನಿಬಂಧನೆ ಕಾಯಿದೆ ಅನುಗುಣವಾಗಿ ವಾಹನ ಚಲಿಸಲು ನಿಯಮಾನುಸಾರ ರಹದಾರಿ ಪಡೆದಿರಬೇಕು ಹಾಗೂ ವಾಹನಕ್ಕೆ ಸಂಬಂಧಿಸಿದ ಮೂಲ ದಾಖಲಾತಿಗಳು ವಾಹನ ಚಾಲಕನ ಜೊತೆಯಲ್ಲಿರಬೇಕಾಗುತ್ತದೆ. ಈ ಕಛೇರಿಗೆ ನೀಡುವ ವಾಹನವನ್ನು ಬೇರಾವುದೇ ಖಾಸಗಿ ವ್ಯಕ್ತಿಗಳಿಗೆ ಅಥವಾ ಖಾಸಗಿ ಪ್ರಯಾಣಕ್ಕೆ ಬಳಸಬಾರದು.
22. ಮಾಹೆಯಾನ **2,500 ಕಿ.ಮೀ.ಗಳಿಗೆ ಗರಿಷ್ಠ 25,000/-ನ್ನು** ನಿಗದಿಪಡಿಸಿದ್ದು, ಈ ದರದ ಒಳಗಿರಬೇಕು.
23. ವಾಹನಕ್ಕೆ ಹಳದಿ ಬೋರ್ಡ್ ಅಳವಡಿಸಿ **"ಕರ್ನಾಟಕ ಸರ್ಕಾರದ ಸೇವೆಯಲ್ಲಿ"** ಎಂಬ ನಾಮಫಲಕವನ್ನು ಅಳವಡಿಸಬೇಕು.
24. ಟೆಂಡರ್‌ನಲ್ಲಿನ ನಿಬಂಧನೆ ಮತ್ತು ನಿಯಮಗಳನ್ನು ಉಲ್ಲಂಘಿಸಿದಲ್ಲಿ, ಯಾವುದೇ ಕಾರಣಗಳನ್ನು ನೀಡದೆ. ಏಕಪಕ್ಷೀಯವಾಗಿ ಆದೇಶವನ್ನು ರದ್ದುಗೊಳಿಸಲಾಗುವುದು. ಟೆಂಡರ್ ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ, ರದ್ದುಪಡಿಸುವ ಅಥವಾ ಮರು ಟೆಂಡರ್ ಕರೆಯುವ ಅಧಿಕಾರವನ್ನು ಟೆಂಡರ್ ಪ್ರಾಧಿಕಾರ ಹೊಂದಿರುತ್ತಾರೆ. ಟೆಂಡರ್ ಸಂಬಂಧ ಯಾವುದೇ ತಕರಾರು ಇದ್ದಲ್ಲಿ ತಾಂತ್ರಿಕ ಬಿಡ್ ಪರಿಶೀಲನಾ ವೇಳೆಯಲ್ಲೆ ಲಿಖಿತವಾಗಿ ಸಲ್ಲಿಸುವುದು. ನಂತರ ಸಲ್ಲಿಸುವ ತಕರಾರುಗಳು ಸಿಂಧುವಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಹಕ್ಕನ್ನು ಟೆಂಡರ್ ಪ್ರಾಧಿಕಾರಿಯವರಿಗೆ ಕಾಯ್ದಿರಿಸಲಾಗಿದೆ.
25. ವಾಹನ ಯಾವುದೇ ಕಾರಣಗಳಿಂದ ಪೋಲೀಸ್ ಇತ್ಯಾದಿ ಪ್ರಕರಣಗಳಿಗೆ ಒಳಗಾದಲ್ಲಿ ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರೆ ಸ್ವತಃ ಇತ್ಯರ್ಥ ಪಡಿಸಕೊಳ್ಳತಕ್ಕದ್ದು. ಹಾಗೂ ಈ ಸಂಬಂಧದಲ್ಲಿ ಉದ್ಭವಿಸಬಹುದಾದ ತೊಂದರೆ ಅಡಚಣೆಗಳನ್ನು ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರೆ ಸ್ವಂತ ಖರ್ಚಿನಲ್ಲಿ ಬಗೆಹರಿಸಿಕೊಳ್ಳತಕ್ಕದ್ದು. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿಯು ಯಾವುದೇ ರೀತಿಯ ಜವಾಬ್ದಾರಿ ಉಳ್ಳವರಾಗಿರುವುದಿಲ್ಲ.
26. ಪ್ರತಿ ಮಾಹೆ ಕಳೆದ ನಂತರ ಟ್ರಿಪ್ ಶೀಟಿನೊಂದಿಗೆ ಸಲ್ಲಿಸುವ ಬಿಲ್ಲನ್ನು ಪರಿಶೀಲಿಸಿ ಖಜಾನೆ ಮೂಲಕ ನಗದೀಕರಣಗೊಳಿಸಲಿದ್ದು, ಬಿಲ್ಲಿನ ಮೊತ್ತದಲ್ಲಿ ನಿಯಾಮಾನುಸಾರ ಆದಾಯ ತೆರಿಗೆ ಕಟಾಯಿಸಿ, ಉಳಿಕೆ ಮೊತ್ತವನ್ನು ಟ್ರಾವೆಲ್ ಏಜೆನ್ಸಿ/ ಅಧಿಕೃತ ವಾಹನ ಮಾಲೀಕರ ಹೆಸರಿಗೆ ಪಾವತಿಸಲಾಗುವುದು.

**ಸಹಿ/-**

**ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,**
**ಮೈಸೂರು ಜಿಲ್ಲೆ, ಮೈಸೂರು**

**ಕರ್ನಾಟಕ ಸರ್ಕಾರ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧ್ಯಾದೇಶ 2000, ಅಧ್ಯಾಯ–2 ಅಧಿನಿಯಮ 3 ರ ಪ್ರಕಾರ

ಅನುಬಂಧ–ಬಿ (ಸರಕುಗಳ ಸರಬರಾಜು ಮತ್ತು ಸೇವೆಗಳು)

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ, ಮೈಸೂರು.**

#5/1, ವಿನೋಬ ರಸ್ತೆ, ಮಾನಸಗಂಗೋತ್ರಿ, ಪ್ರೀಮಿಯರ್ ಸ್ಟುಡಿಯೋ ಎದುರು, ಮೈಸೂರು–570006.

ಟೆಂಡರ್ ಸಂಖ್ಯೆ: 01/2019–20 ದಿನಾಂಕ:01–07–2019

| ಕ್ರ. ಸಂ | ಟೆಂಡರ್ ಹೊರಡಿಸಿದ ಪ್ರಾಧಿಕಾರ | ಟೆಂಡರ್ ಕ್ರಮಾಂಕ ಹಾಗೂ ದಿನಾಂಕ | ಕಾಮಗಾರಿ/ ಸರಕುಗಳ ಸರಬರಾಜು ಮತ್ತು ಸೇವೆಗಳ ವಿವರ | ಅಂದಾಜು ಮೊತ್ತ ಲಕ್ಷ (ರೂ.ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | Globle positioning System PARA METER | ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ ಮತ್ತು ಸಮಯ | ಭರ್ತಿ ಮಾಡಿದ ಟೆಂಡರ್ ಫಾರಂ/ದಾಖಲೆಗಳನ್ನು ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ | ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ಟೆಂಡರ್ ಸ್ವೀಕರಿಸುವ ಪ್ರಾಧಿಕಾರ |
|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** |
| 1 | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ ಮೈಸೂರು ಜಿಲ್ಲೆ, ಮೈಸೂರು–570006 | ಸಂಖ್ಯೆ: ಜಿಕೌಕಮೈ–7/ಖರೀದಿ/ಸಿ.ಆರ್–1/2019–20 ದಿ:01/7/2019 | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿಗೆ 2019–20ನೇ ಸಾಲಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನ ಸ್ವಿಫ್ಟ್ ಡಿಸೈರ್ /ಇಟಿಯೋಸ್ ಪಡೆಯುವ ಸಲುವಾಗಿ (2017ರ ನಂತರದ ವಾಹನ) | 3.00 | 5000/– | 12’ 19’ 16” ಓ 76’ 37’00” ಇ | 05/07/2019 ಬೆಳಿಗ್ಗೆ 10.30 ರಿಂದ 15/07/2019 ರ ಮಧ್ಯಾಹ್ನ 1.00 ಗಂಟೆಯ ವರೆಗೆ | 15/07/2019 ರ ಸಂಜೆ 3.00 ಗಂಟೆಯ ವರೆಗೆ | 16/07/2019 ರ ಬೆಳಿಗ್ಗೆ 11.00 ಗಂಟೆಗೆ | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಛೇರಿ ಮೈಸೂರು ಜಿಲ್ಲೆ, ಮೈಸೂರು–570006. |

**ಸಹಿ/–**

**ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,**

**ಮೈಸೂರು ಜಿಲ್ಲೆ, ಮೈಸೂರು**